Volume : 4 | Issue : 1 | Jan 2015 ISSN - 2250-1991

Research Paper Kannad

# ಬಾಬಾಸಾಹೇಬ ವಾರದ

# (A GREAT REFORMER SHRI BABASAHEAB WARAD)

Dr.(smt.)NEELAMBIKA POLICEPATIL (SHERIKAR)

Research Guide & Principal, Godutai Doddappa Appa Degree College For Women, S.B.Temple Road, KALABURAGI-585103.

ತನುವಿನಲ್ಲಿ ನಿರ್ಮೋಹ
ಮನದಲ್ಲಿ ನಿರಹಂಕಾರ
ಪ್ರಾಣದಲ್ಲಿ ನಿರ್ಭಯ ಚಿತ್ತದಲ್ಲಿ ನಿರಪೇಕ್ಷೆ
ವಿಷಯದಲ್ಲಿ ಉದಾಸೀನ ಭಾವದಲ್ಲಿ ದಿಗಂಬರ
ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ
ಸೌರಾಷ್ಟ್ರ ಸೋಮೇಶ್ವರಾ ಲಿಂಗದಲ್ಲಿ
ಅಭೇದ್ಯ ಕಾಣಿರೋ

ಮಹಾ ವಚನಕಾರರಾದ ಆದಯ್ಯನವರ ವಚನದ ಪ್ರತಿರೂಪವೇ ಆಗಿದ್ದರು ಸೊಲ್ಲಾಪುರದ ಚನ್ನಬಸಪ್ಪ ಮಲ್ಲಪ್ಪಾ ವಾರದ ಉರ್ಫ್ ಬಾಬಾಸಾಹೇಬ ವಾರದ.

ಬಾಬಾಸಾಹೇಬ ವಾರದ ಅವರು ಹುಟ್ಟಿದ್ದು ೧೯೦೯ ಅಕ್ಟೋಬರ ೧೦ ರಂದು ತಂದೆ ಮಲ್ಲಪ್ಪ ವಾರದ ತಾಯಿ ಗೌರಮ್ಮ. ಇಟ್ಟ ಹೆಸರು ಚನ್ನಬಸಪ್ಪ ನಾದರೂ ಅವರು ಪ್ರಸಿದ್ಧರಾದದ್ದು ಬಾಬಾಸಾಹೇಬ ವಾರದ ಎಂದು.

ಆ ಕಾಲದಲ್ಲಿ ಮಲ್ಲಪ್ಪ ವಾರದ ಅವರದು ಅತೀ ದೊಡ್ಡ ಹೆಸರು. ಅವರ ಸತತವಾದ ಪರಿಶ್ರಮ, ಕಾಯಕದೊಳಗಿನ ನಿಷ್ಠೆ ದಾಸೋಹ ಭಾವನೆ ಅವರನ್ನು ಅತೀ ಮೇಲ್ದರ್ಜೆಗೆ ಒಯ್ದವು, ತನ್ನ ಪೂರ್ವಿಕರು ಬಟ್ಟೆಯ ವ್ಯಾಪಾರಿಗಳು ಮಾತ್ರವಾಗಿದ್ದರು. ಆದರೆ ಮಲ್ಲಪ್ಪ ವಾರದರವರು ೬೨ ಅಡತ್ ಅಂಗಡಿಗಳನ್ನು ೫೦೦೦ ಎಕರೆ ಒಕ್ಕಲುತನದ ಭೂಮಿ, ಜಿನ್ನಿಂಗ್ ಫ್ಯಾಕ್ಟರಿ – ಮುಂತಾದವುಗಳು ಗಳಿಸಿ ಅಗರ್ಭ ಶ್ರೀಮಂತರೆನಿಸಿದ್ದರು. ಇವರುಗೈದ ಒಕ್ಕಲುತನವನ್ನು ಕಂಡು ಇಂಗ್ಲೆಂಡಿನ ಆರನೆಯ ಎಡ್ವರ್ಡ್ "ಇಡೀ ಭಾರತದಲ್ಲಿ ಸುಧಾರಿಸಿದ ಮತ್ತು ಲಾಭದಾಯಕವಾದ ರೀತಿಯಲ್ಲಿ ಒಕ್ಕಲುತನ ಮಾಡಿದ 'ಅಗ್ರಗಣ್ಯ ವ್ಯಕ್ತಿ ಮಲ್ಲಪ್ಪ ವಾರದ' – ಎಂದು ಉದ್ಗಾರ ತೆಗೆದಿದ್ದಾರೆ. ಆಧ್ಯಾತ್ಮವಾದಿಗಳಾಗಿದ್ದ ಮಲ್ಲಪ್ಪ ವಾರದರವರು ವೀರಶೈವ ತತ್ವಗಳಾದ ಗುರು–ಲಿಂಗ–ಜಂಗಮರ ಆರಾಧಕರು ಆಗಿದ್ದರು. ಬಸವಾದಿ ಪ್ರಮಥರಲ್ಲಿ ವಿಶೇಷ ಭಕ್ತಿಯನಿಟ್ಟು ಕೊಂಡವರು.

ಇಂತಹ ಮಹಾನ್ ವ್ಯಕ್ತಿಯ ಉದರದಲ್ಲಿ ಜನಿಸಿದ ಏಕೈಕ ಪುತ್ರ ಬಾಬಾಸಾಹೇಬ ವಾರದ. ಇವರು ಹದಿಮೂರು ವಯಸ್ಸಿನವರಿದ್ದಾಗ ತಂದೆ ಮಲ್ಲಪ್ಪ ವಾರದವರು ಲಿಂಗೈಕ್ಯರಾದರು. ತಾವು ಲಿಂಗೈಕ್ಯರಾಗುವ ಪೂರ್ವದಲ್ಲಿ ತಮ್ಮ ಬೃಹತ್ ಆಸ್ತಿಯನ್ನು ಮತ್ತು ತಮ್ಮ ಏಕೈಕ ಪುತ್ರ ಬಾಬಾಸಾಹೇಬರನ್ನು ನೋಡಿಕೊಳ್ಳಲು ಮಲ್ಲಪ್ಪ ಅಜ್ಜನವರು ಐದು ಜನರ ಟ್ರಸ್ಟ್ ಮಾಡಿದರು.ಆದರೆ ಮುಂದೆ ಕಾರಣಾಂತರಗಳಿಂದ ಅಂದಿನ ಸರ್ಕಾರವು ಟ್ರಸ್ಟಿಗಳ ಹಿಡಿತದಲ್ಲಿದ್ದ ಆಸ್ತಿಯನ್ನು ತನ್ನ ಆಧೀನಕ್ಕೆ ಒಳಪಡಿಸಿಕೊಂಡಿತ್ತಲ್ಲದೆ ಹತ್ತು ವರ್ಷದ ಮಗ ಬಾಬಾಸಾಹೇಬರನ್ನು ರಕ್ಷಣೆಯ ಭಾರತವನ್ನು ತಾನೇ ವಹಿಸಿಕೊಂಡಿತು. ಅಂದಿನ ಸೊಲ್ಲಾಪುರದ ಕಲೆಕ್ಟರ್ ಅವರಿಗೆ ಮಗುವನ್ನು ಒಪ್ಪಿಸಿ, ಆತನ ಎಲ್ಲಾ ರೀತಿಯ ಬೆಳವಣಿಗೆಯ ಜವಾಬ್ದಾರಿಯನ್ನು ಆ ಜಿಲ್ಲಾಧಿಕಾರಿಗೆ ವಹಿಸಿಕೊಡಲಾಯಿತು. ಬ್ರಿಟಿಷ್ ಅಧಿಕಾರಿಗಳಾಗಿದ್ದ ಜಿಲ್ಲಾಧಿಕಾರಿಗಳು ತುಂಬಾ ಶಿಸ್ತಿನ, ಪ್ರಾಮಾಣಿಕ, ದಕ್ಷ ಮತ್ತು ಜವಾಬ್ದಾರಿಯನ್ನರಿತ ಸುಸಂಸ್ಕೃತಿ ಆಡಳಿತಾಧಿಕಾರಿಗಳಾಗಿದ್ದರು. ಬಾಬಾಸಾಹೇಬರನ್ನು ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಇವರಿಗಾಗಲಿ ಅವರ ಮನೆತನಕ್ಕಾಗಲಿ ಯಾವುದೇ ಧಕ್ಕೆ ಆಗದಂತೆ ನೋಡಿಕೊಂಡರು.

ಆಫೀಸಿನ ತಮ್ಮ ಕೋಣೆಯಲ್ಲಿಯೆ ಬಾಲಕನಿಗೆ ಒಂದು ಕುರ್ಚಿ ಹಾಕಿಸಿದ್ದರು. ಮುಂಜಾನೆ ೧೦.೦೦ ಗಂಟೆಗೆಲ್ಲ ಬಾಲಕ ಆಫೀಸಿಗೆ ಬರಬೇಕಾಗುತ್ತಿತ್ತು. ಸಂಜೆ ೫.೦೦ ಗಂಟೆಯವರೆಗೆ ಅವರ ಒಡನಾಟ. ಇಲ್ಲಿ ಅವರಿಗೆ ಇಂಗ್ಲೀಷ್ ಭಾಷೆ ಕಲಿಸಲಾಯಿತು. ಹೀಗಾಗಿ ಚಿಕ್ಕವರಾಗಿದ್ದಾಗಿನಿಂದಲೇ ಅವರು ಇಂಗ್ಲೀಷಿನಲ್ಲಿ ನಿರರ್ಗಳವಾಗಿ ಮಾತನಾಡುವ, ಬರೆಯುವ, ಓದುವದನ್ನು ಕರಗತವನ್ನಾಗಿಸಿಕೊಂಡರು. ಇವರಿಗಾಗಿ ಜಿಲ್ಲಾಧಿಕಾರಿ ತಮ್ಮ ಆಫೀಸಿನಲ್ಲಿ ಒಳ್ಳೊಳ್ಳೆಯ ಪುಸ್ತಕಗಳನ್ನು ತಂದಿಟ್ಟುಕೊಂಡಿದ್ದರು. ಅವರಿಗೆ ಓದಿ ಹೇಳುತ್ತಿದ್ದರು. 'ಜೀವನದಲ್ಲಿ ಕಲ್ಪನೆ, ಭಾವನೆಗಳಿಗಿಂತ ವಿಚಾರಶಕ್ತಿ ಬಹು ಮುಖ್ಯವಾದುದು'. – ಎಂಬ ಜಿಲ್ಲಾಧಿಕಾರಿಗಳ ಮಾತನ್ನು ಬಾಬಾಸಾಹೇಬರು ಯಾವಾಗಲು ನೆನಪಿಸಿಕೊಳ್ಳುತ್ತಿದ್ದರು. ಅವರ್ಮಾತು ಅವರಿಗೆ ಮಾರ್ಗದರ್ಶಿಯು ಆಯಿತು. ಅವು ಬಾಲಕನಲ್ಲಿ ಒಳಗೊಳಗೆ ಹೆಚ್ಚು ಧೈರ್ಯಶಾಲಿಯಾಗುವಂತೆ ಮತ್ತು ದೊಡ್ಡವನಾಗುವದಕ್ಕೆ ಪ್ರೇರಣೆಯನ್ನೊದಗಿಸಿದವು.

ಜಿಲ್ಲಾಧಿಕಾರಿಗಳ ಕಾರ್ಯತತ್ಪರತೆ, ಶಿಸ್ತು ಬರವಣಿಗೆಯ ರೀತಿ ಇವು ಬಾಬಾಸಾಹೇಬರ ಮೇಲೆ ಹೆಚ್ಚಿನ ಪ್ರಭಾವ ಬೀರಿದವು. ಜೀವನದ ಕೊನೆಯ ಗಳಿಗೆವರೆಗೂ ಅವುಗಳನ್ನು ಅವರು ಮರೆಯಲಿಲ್ಲ. ಇಂದು ಅವರನ್ನು ಕುರಿತು ಬರೆಯುವ ಲೇಖನಕ್ಕೆ ಅವರ ಪತ್ರಗಳೇ ಆಧಾರಗಳಾಗಿವೆ. ಅವುಗಳು ಬರೆದ ಶೈಲಿ, ವಿಷಯ ಪ್ರತಿಪಾದನೆ ಇವು ಅಚ್ಚರಿಯನ್ನುಂಟು ಮಾಡಿಸುತ್ತವೆ. ದೇಶದ ರಾಷ್ಟ್ರಪತಿಗಳಿಂದ ಹಿಡಿದು ಜಿಲ್ಲಾಧಿಕಾರಿಗಳವರೆಗೆ ಅವರು ಬರೆದ ಸಾವಿರಾರು ಪತ್ರಗಳು ಲಭ್ಯವಾಗಿವೆ. ಅವು ಎಲ್ಲವು ನಾಡಿಗಾಗಿ, ಧರ್ಮಕ್ಕಾಗಿ, ಮತ್ತು ಬಸವಕಲ್ಯಾಣದ ಅಭಿವೃದ್ಧಿಗಾಗಿ.

ಅವರು ಇಪ್ಪತ್ತೊಂದನೆಯ ವಯಸ್ಸಿನವರಾಗುವ ತನಕ ಜಿಲ್ಲಾಧಿಕಾರಿ ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಿದರು. ೧೯೩೦ ಅಕ್ಟೋಬರ್ ೧೦ ರಂದು ಅಂದರೆ ಬಾಬಾಸಾಹೇಬರ ಇಪ್ಪತ್ತೊಂದನೆಯ ವಯಸ್ಸಿನವರಲ್ಲಿದ್ದಾಗ ಅವರ ಇಡೀ ಆಸ್ತಿಯನ್ನು ಸರ್ಕಾರವು ಇವರಿಗೆ ಹಸ್ತಾಂತರಿಸಿತು. ೫೩೦೦ ಎಕರೆ ಭೂಮಿ, ೩೫ ಅಡತಿ ಅಂಗಡಿಗಳು, ಜಿನ್ನಿಂಗ ಫ್ಯಾಕ್ಟರಿಗಳು ಲೆಕ್ಕವಿಲ್ಲದಷ್ಟು ಬಂಗಾರ, ಬೆಳ್ಳಿ, ವಜ್ರಗಳಿರುವ ಸಣ್ಣ ಸಣ್ಣ ಚೀಲಗಳು – ಇಷ್ಟು ಆಸ್ತಿಗೆ ಅವರು ಒಡೆಯರಾದರು.

ಆದರೆ ತಾನಿದರ ಒಡೆಯ ಎಂದು ಅವರು ಕುಣಿದಾಡಲಿಲ್ಲ. ಮನಸ್ಸು ಚಂಚಲಗೊಳ್ಳಲಿಲ್ಲ. ಬದಲಾಗಿ ಇಂತಹ ಆಸ್ತಿಯನ್ನು ಹೇಗೆ ಸಂಭಾಳಿಸಲಿ ಎಂಬ ದೊಡ್ಡ ಚಿಂತೆ ಆಯಿತು. ತಾಯಿಯೊಂದಿಗೆ ವಿಚಾರ ಮಾಡಿದರು. ತಾಯಿ ಗೌರಮ್ಮ ಎಲ್ಲವನ್ನು ಬಲ್ಲ ಧೈರ್ಯದ ಹೆಣ್ಣುಮಗಳು ತನ್ನ ಮಗನದಲ್ಲಿ ಧೈರ್ಯ ತುಂಬಿದವರೇ ಅವರು. ತಾಯಿಯ ಮಾತುಗಳು ಮಗನಿಗೆ ಸ್ಫೂರ್ತಿಯ ಸೆಲೆಯಾದವು.

ಅಗರ್ಭ ಶ್ರೀಮಂತರೇನೊ ಹೌದು! ಆದರೆ ಅವರ ಜೀವನ ಎಂದೂ ಹೂವಿನ ಹಾಸಿಗೆಯಾಗಲಿಲ್ಲ. ಹುಟ್ಟಿದ್ದಾಗಿನಿಂದ ಹಿಡಿದು ಸಾಯುವರೆಗಿನ ಅವರ ಬದುಕು ಹೋರಾಟದ ಬದುಕೆ. ಅದೆಷ್ಟೊ ಮಾನವ ರೂಪದ ವಿಷ ಜಂತುಗಳು ಅವರನ್ನು ಕಚ್ಚಿವೆ; ಸಾಯಿಸಲೂ ಪ್ರಯತ್ನಿಸಿವೆ. ಇದ್ದೊಬ್ಬ ವಾರದ ವಾರಸುದಾರನನ್ನು ಕೊಂದರೆ ಆಸ್ತಿಯು ತಮ್ಮ ಕೈಗೆ ಸೇರುವದೆಂಬುದಕ್ಕೆ ಹೊಂಚು ಹಾಕಿ ಕೂತವರು ಅದೆಷ್ಟೊ ಜನ. ಇದೆಲ್ಲವು ತಿಳಿದರೂ ತಿಳಿಯದಂತೆ ತಮ್ಮ ಕೆಲಸ ನಿರ್ವಹಿಸುತ್ತಿದ್ದರು. "ನಾನು ಮನುಷ್ಯರನ್ನು ನಂಬುತ್ತೇನೆ; ಪ್ರೀತಿಸುತ್ತೇನೆ ಗೌರವಿಸುತ್ತೇನೆ. ಏಕೆಂದರೆನಾನು ಮನುಷ್ಯನೆ'! ಎಂದು ಹೇಳುತ್ತಿದ್ದರು. ಇಂತಹ ಮಾತುಗಳನ್ನಾಡಿ ಅಂತಹ ವಿಷ ಜಂತುಗಳನ್ನು ರಕ್ಷಣೆ ಮಾಡಿ ಮಾನವೀಯ ಮೌಲ್ಯ ಮರೆದರು. ಎಂತಹ ದುರ್ಧರ ಪ್ರಸಂಗದಲ್ಲಿಯು ಸಹ ಮನೋಸ್ಥೈರ್ಯ ಕಳೆದುಕೊಳ್ಳಲಿಲ್ಲ. ತನ್ನೊಳಗಿನ ಸಾವಿರಾರು ಚಿಂತನೆಗಳನ್ನು ತಮ್ಮ ಸಾಮಾಜಿಕ, ಆಧ್ಯಾತ್ಮಿಕ ಕ್ಷೇತ್ರದೊಳಗೆ ಕೆಲಸ ಮಾಡುತ್ತಾ ಮರೆತು ಬಿಟ್ಟರು. ಯಾವ ದಿನ ತಮ್ಮ ಆಸ್ತಿಗೆ ಒಡೆಯರಾದರೋ ಅಂದೇ ನೀತಿ ಸಚ್ಚಾರಿತ್ರ್ಯದ ಮೇಲೆ ತಮ್ಮ ಬದುಕನ್ನು ಕಟ್ಟುವದಾಗಿ ಶಪಥ ಮಾಡಿದರು. ಎಂದು ಆ ಮಾತಿಗೆ ಕಳಂಕ ತಂದುಕೊಳ್ಳಲಿಲ್ಲ.

ಬಾಬಾಸಾಹೇಬರ ಪರಿಶುದ್ಧ ಚಾರಿತ್ರ್ಯ ಜನರ ಮೇಲಿಟ್ಟ ಪ್ರೀತಿ, ನಿಷ್ಕಲ್ಮಶ ಹೃದಯ ಅವರನ್ನು ಚಿಕ್ಕ ವಯಸ್ಸಿನಲ್ಲಿಯೇ ಜನಪ್ರಿಯಗೊಳಿಸಿದ್ದವು. ಅವರ ಧರ್ಮ ಕೇವಲ ಗುಡಿ–ಗುಂಡಾರಗಳಿಗೆ ಮಾತ್ರ ಮೀಸಾಲಗಿರಲಿಲ್ಲ ಅದರಾಚೆಯ ಧರ್ಮ ಅವರು ಅನುಸರಿಸಿದ್ದರು. ಬಸವಾದಿ ಪ್ರಮಥರಂತ ದಯೆಯನ್ನು ಒಳಗೊಂಡ ಧರ್ಮ ಅವರು. ಪ್ರತಿಯೊಂದು ಜೀವಯಲ್ಲಿ ಅದನ್ನು ಕಂಡುಕೊಂಡಿದ್ದರು. ಗುರು–ಲಿಂಗ–ಜಂಗರಲ್ಲಿ ಮಾತ್ರವಲ್ಲ ಬಡವರು, ದೀನದಲಿತರಲ್ಲಿ, ನಿರ್ಗತಿಕರಲ್ಲಿ, ಹಸಿದವರಲ್ಲಿ ತುಂಬಾ ಕರುಣೆಯನ್ನಿಟ್ಟುಕೊಂಡಿದ್ದರು.

ತನ್ನದಾಗಿರುವ ಸಂಪತ್ತನ್ನೆಲ್ಲಾ ಅವರು ಕೂಡಿಡುವ ಬದಲು ಸಮಾಜಕ್ಕೆ ವಿನಿಯೋಗಿಸಿದರು. ಅಥಣಿಯ ಪೂಜ್ಯ ಶಿವಯೋಗಿಗಳ ಮಾರ್ಗದರ್ಶನವು ಇವರಿಗೆ ಸಿಕ್ಕಿತು. ತಮ್ಮ ೨೧ನೆಯ ವಯಸ್ಸಿನಲ್ಲಿ ಸಾರ್ವಜನಿಕ ಸೇವಾ ರಂಗಕ್ಕೆ ಇಳಿದರು. ಸಾರ್ವಜನಿಕ ಸೇವೆಗಾಗಿಯೇ ಆ ಕ್ಷೇತ್ರವನ್ನು ಆರಿಸಿಕೊಂಡರೆ ವಿನಃ ಎಂ.ಎಲ್.ಎ., ಎಂ.ಪಿ., ಮಂತ್ರಿಯೋ ಆಗಬೇಕೆಂಬ ಉದ್ದೇಶದಿಂದಲ್ಲ, ನಗರಸಭಾ ಅಧ್ಯಕ್ಷರಾಗಿ ಅನೇಕ ಕೆಲಸಗಳನ್ನು ಸೊಲ್ಲಾಪುರನಲ್ಲಿ ಮಾಡಿದರು.

ನಂತರದ ದಿನಗಳಲ್ಲಿ ಬಾಬಾಸಾಹೇಬರು ತಮ್ಮ ಜೀವನವನ್ನು ಬಸವಕಲ್ಯಾಣದ ಸೇವೆಗಾಗಿ ಮುಟುಪಾಗಿಟ್ಟರು.'ಎತ್ತರ ಮಾಮರ ಎತ್ತಣ ಕೋಗಿಲೆ ಎತ್ತಣಿದೆತ್ತ ಸಂಬಂಧವಯ್ಯಾ' ಎಂಬ ಅಲ್ಲಮಪ್ರಭುಗಳ ವಚನ ಬಾಬಾಸಾಹೇಬ ವಾರದವರ ವ್ಯಕ್ತಿತ್ವಕ್ಕೆ ಒಪ್ಪುವಂತಹದು, ಎತ್ತಣ ಕಲ್ಯಾಣ ಎತ್ತಣ ಸೊಲ್ಲಾಪುರದ ಬಾಬಾಸಾಹೇಬರು. ಕಲ್ಯಾಣದಲ್ಲಿ ಹುಟ್ಟಿದವರಲ್ಲ, ಬೆಳೆದವರಲ್ಲ. ಅವರು ಮನೆತನದವರು ಕೈಕೊಂಡ ವ್ಯಾಪಾರದ ಸ್ಥಳ ಕೂಡಾ ಕಲ್ಯಾಣವಾಗಿರಲಿಲ್ಲ. ಆದರೆ ಅದ್ಯಾವ ಮೋಹ ಅವರನ್ನು ಕಲ್ಯಾಣದತ್ತ ಸೆಳೆಯಿತೊ? ಅದ್ಯಾವ ಶುಭಗಳಿಗಿಯಲ್ಲಿ ಕಲ್ಯಾಣದಲ್ಲಿ ಕಾಲಿಟ್ಟರೊ ಆ ಘಳಿಗೆ ಬಸವಕಲ್ಯಾಣದ ಐತಿಹಾಸಿಕ ಪುಟದಲ್ಲಿ ಬರೆದಿಡುವಂತಾಯಿತು.

೧೯೪೭ರಲ್ಲಿ ಅಂದರೆ ತಮ್ಮ ಮೂವತ್ತೆಂಟನೆಯ ವಯಸ್ಸಿನಲ್ಲಿ ಅವರು ಕಲ್ಯಾಣಕ್ಕೆ ಬಂದರು. ಕಲ್ಯಾಣಕ್ಕೆ ಅವರು ಬಂದದ್ದು ದರ್ಶನಾರ್ಥಿಯಾಗಿಯೇ. ಆದರೆ ಉಳಿದ ದರ್ಶನಾರ್ಥಿಗಳಂತೆ ಕಲ್ಯಾಣದ ಮಣ್ಣನ್ನು ಹಣೆಗೆ ಹಚ್ಚಿಕೊಂಡು ಪುನೀತರಾದೆವೆಂದು ಭಾವಿಸಲಿಲ್ಲ. ಅಲ್ಲಿಯ ಗವಿಗಳಲ್ಲಿ ದೇವಾಲಯಗಳನ್ನು ದರ್ಶಿಸಿ ಕೇವಲ ಧನ್ಯತಾಭಾವ ಸೂಚಿಸಲಿಲ್ಲ. ಕಲ್ಯಾಣದ ದುರ್ದೆಸೆ ಕಂಡು ಕಸಿವಿಸಿಗೊಂಡರು. ಶಿವಶರಣರ ಶಿವಯೋಗದ ನೆಲೆಗಳ ಮೇಲೆ ಹುಲ್ಲು ಗಿಡಗಂಟಿ ಬೆಳೆದುದ್ದನ್ನು ಕಂಡು ತಲ್ಲಣಿಸಿದರು.

ಒಂದು ಕಾಲಕ್ಕೆ ಅತಿರಥ, ಮಹಾರಥರಿಗೆ ರಾಜಧಾನಿಯಾಗಿ ಮೆರೆದು ಕಲೆ, ವ್ಯಾಪಾರ, ವಾಣಿಜ್ಯ, ಭಾಷೆ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆಗೈದು ಇಡೀ ದೇಶದ ಜನರನ್ನು ತನ್ನತ್ತ ಬರಮಾಡಿಕೊಂಡ ಕಲ್ಯಾಣದಲ್ಲಿ ಅಂದು ಒಂದೂ ಶಾಲಾ ಕಾಲೇಜುಗಳಿಲ್ಲದದ್ದು, ಸರಿಯಾದ ರಸ್ತೆ ಸಾರಿಗೆ ವ್ಯವಸ್ಥೆಯಿಲ್ಲದದ್ದು. ಕಂಡು

ನಿರಾಶೆಗೊಂಡರು, ಅಸಂಖ್ಯಾತ ಶಿವಶರಣರು ಕಾಯಕಗೈದ ಕಾಯಕದ ಕಲ್ಯಾಣ, ಮನುಷ್ಯನ ಆತ್ಮೋದ್ಧಾರ ಮಾಡಿ ಕೈಲಾಸಕ್ಕಿಂತ ಶ್ರೇಷ್ಠವೆನಿಸಿಕೊಂಡ ಕಲ್ಯಾಣ, ಇಡೀ ಜೀವರಾಶಿಗೆ ಕಲ್ಯಾಣಗೈದ ಕಲ್ಯಾಣ ಅನಾಥರೂಪದಲ್ಲಿರುವದನ್ನು ಕಂಡು ದುಃಖಿಸಿದರು. ವಿಶ್ವಗುರು ಬಸವಣ್ಣನವರ ಕರ್ಮಭೂಮಿಯು ಇದೆಯೇ? ಎಂಬ ಪ್ರಶ್ನೆ ಅವರಲ್ಲಿ ಮೂಡಿತ್ತು. ಚಾಲುಕ್ಯರ ಕಾಲದ ಸ್ಮಾರಕಗಳಿಲ್ಲ, ಜಗತ್ತಿನ ಪ್ರಥಮ ಸಂಸತ್ತು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಅನುಭವ ಮಂಟಪವಿಲ್ಲ, ಅನೇಕ ಜನರಿಗೆ ಆಸರೆಯನ್ನು ಮತ್ತು ಜ್ಞಾನವನ್ನು ಕೊಟ್ಟ ಮಹಾಮನೆಯಿಲ್ಲ. ಕಲ್ಯಾಣದ ಒಂದಂಗುಲ ನೆಲಸಹ ಅಂದು ಪರಕೀಯ. ಎಲ್ಲಾ ಉರ್ದುಮಯ, ಮರಾಠಿಮಯ.

ಬಸವಕಲ್ಯಾಣದ ಇಂತಹ ದುಸ್ಥಿತಿಗೆ ಬಾಬಾಸಾಹೇಬ ವಾರದವರು ದಿಗ್ಭ್ರಮೆಗೊಂಡರು. ಕಲ್ಯಾಣಕ್ಕೆ ಕಾಲಿಟ್ಟಾಗಿನ ಕ್ಷಣದಲ್ಲಿಯ ತಮ್ಮ ಅನುಭವವನ್ನು ಹೀಗೆ ಬರೆಯುತ್ತಾರೆ. “ನನ್ನ ತಂದೆ ಸತ್ತಾಗ ನಾನು ಹಸುಳೆಯಾಗಿದ್ದೆ. ನನ್ನ ತಾಯಿ ಮತ್ತು ಹೆಂಡತಿ ಸತ್ತಾಗ ವೇದಾಂತಿಯಾಗಿದ್ದೆ. ನನ್ನ ಅತೀದೊಡ್ಡ ಆಸ್ತಿ ಕಳೆದುಕೊಂಡಾಗ ತ್ಯಾಗಿಯಾಗಿದ್ದೆ. ಆದರೆ ಬಸವಕಲ್ಯಾಣಕ್ಕೆ ಕಾಲಿಟ್ಟಾಗ ಮಾತ್ರ ದುಃಖ ತಡೆಯಲಾಗಲಿಲ್ಲ, ಅದರ ದುರ್ದೆಸೆಗೆ ಕಣ್ಣೀರಿಟ್ಟೆ”.

ಆದರೆ ದುಃಖಿಸುತ್ತಾ ಕೂಡಲಿಲ್ಲ. ತನ್ನದೆನ್ನುವ ಕಾರ್ಯವನ್ನೆಲ್ಲ ಮರೆತರು, ಕಲ್ಯಾಣದ ಸರ್ವಾಂಗ ಅಭಿವೃದ್ಧಿಯೇ ಅವರಿಗೆ ಮಹಾಕಾಯಕವಾಯಿತು. ಕಲ್ಯಾಣದ ಬಗ್ಗೆ ಅವರಿಗಿದ್ದ ಗಾಢವಾದ ಆಸಕ್ತಿ, ತೀಕ್ಷ್ಣ ಜ್ಞಾನ, ಕಾರ್ಯತತ್ಪರತೆ ಗಮನಿಸುವ ಅಂಶಗಳಾಗಿದ್ದವು. ತಮ್ಮ ಒಟ್ಟು ಆಯುಷ್ಯದ ಅರ್ಧದಷ್ಟು ಆಯುಷ್ಯವನ್ನು ಕಲ್ಯಾಣದಲ್ಲಿ ಕಳೆದರು, ಅದಕ್ಕಾಗಿ ಸೆವೆಸಿದರು. ಸೊಲ್ಲಾಪುರದ ತಮ್ಮ ಭವ್ಯ ಬಂಗಲೆ, ಆಸ್ತಿ, ಅಷ್ಟೆ ಏಕೆ ತಾಯಿ, ಹೆಂಡತಿ, ಮಕ್ಕಳನ್ನೆ ಮರೆತರು. ಕಲ್ಯಾಣದ ಅಭಿವೃದ್ಧಿಗಾಗಿ ಸನ್ನದ್ಧರಾದರು.

ಕಲ್ಯಾಣದ ಹಾಳು ಬೀದಿ ಬೀದಿಯಲ್ಲಿ ಅಡ್ಡಾಡಿದರು. ಎತ್ತರವಾದ ತೆಳ್ಳನೆಯ ದೇಹಾಕೃತಿ, ಉದ್ದಮೂಗು, ಬಿಳಿಬಣ್ಣ, ಅಗಲವಾದ ಹಣೆ, ಕೊರಳಲ್ಲಿ ಇಷ್ಟಲಿಂಗ, ಹಣೆಯ ಮೇಲೆ ವಿಭೂತಿ, ಬಿಳಿ ಧೋತರ, ಬಿಳಿ ಅಂಗಿ, ತಲೆಯ ಮೇಲೆ ಗಾಂಧಿ ಟೋಪಿ. ಎಲ್ಲರೂ ತನ್ನವರೆನ್ನುವ ಭಾವ, ಶುದ್ಧ ಮಾತು. ಇಂತಹ ಸರಳ ಸಜ್ಜನ ವ್ಯಕ್ತಿ ಕಲ್ಯಾಣದ ನೆಲದಲ್ಲಿ ಅಡ್ಡಾಡುವಾಗ ಆಪುರದ ಜನರಿಗೆ ತಮ್ಮ ಭೂಮಿಯಲ್ಲಿ ಬಾಳಿಹೋದ ಶರಣರು ನೆನಪಾಗುತ್ತಿದ್ದರು. ಪರಶಿವನು ತನ್ನ ನೆಲೆಯಾದ ಕಲ್ಯಾಣಕ್ಕೆ ಬಿಳಿ ವಸ್ತ್ರಧಾರಿಯಾದ, ನಿರ್ಮಲ ಮನಸ್ಸಿನ ಇವರನ್ನು ಕಳುಹಿಸಿ ಕೊಟ್ಟಿರಬಹುದೆಂದು ಜನರು ಮಾತಾಡಿಕೊಳ್ಳುತ್ತಿದ್ದರು.

ಕಲ್ಯಾಣದ ನೆಲದಲ್ಲಿ ಅವರು ಗೈದದ್ದು ನಿಜವಾದ ಅರ್ಥದಲ್ಲಿ ಸೇವೆಯಾಗಿತ್ತು. ಆ ಸೇವೆಯಲ್ಲಿ ಯಾವ ಸ್ವಾರ್ಥವಿಲ್ಲ, ಮಾನ ಸನ್ಮಾನಗಳ ಅಪೇಕ್ಷೆ ಇಲ್ಲ. ತನ್ನ ಪ್ರಚಾರತೆಯ ಹುಚ್ಚಿಲ್ಲ, ನಾನು ಮಾಡುತ್ತೇನೆನ್ನುವ ಗರ್ವವಿಲ್ಲ. ಅನಾಮಧೇಯ ಸೇವಕರಾಗಿ, ತ್ಯಾಗಿಯಾಗಿ ಅನೇಕ ಯಾತನೆಗಳನ್ನು ಅನುಭವಿಸಿ ಈ ನಾಡ ಸೇವೆಗೆ ಕಂಕಣಬದ್ಧರಾದರು. ಮೋಳಿಗೆ ಮಾರಯ್ಯ, ಸಕಲೇಶ ಮಾದರಸರಂತಹ ಶರಣರು ತಮ್ಮ ರಾಜವೈಭವವನ್ನು ತೊರೆದು ಕಲ್ಯಾಣದಲಲಿ ಸಾಮಾನ್ಯರಂತೆ ಬದುಕಿ ಶರಣರೆನಿಸಿಕೊಂಡಿದ್ದರು. ಒಂದರ್ಥದಲ್ಲಿ ಬಾಬಾಸಾಹೇಬರು ಅರಸರೆ! ಯಾವುದರ ಕೊರತೆಯಿಲ್ಲ. ಆದರೆ ಅದೆಲ್ಲವನ್ನು ಅಲ್ಲಿಯ ಇಟ್ಟು ಕಲ್ಯಾಣಕ್ಕೆ ಬಂದು ಶರಣರಂತೆ ಬದುಕಿದರು. ಕಲ್ಯಾಣ ಊರಿನ ಸೇವೆ ಅದು ಬಸವಾದಿ ಪ್ರಮಥರ ಸೇವೆಗೈದಂತೆ ಎಂದು ತಿಳಿದುಕೊಂಡರು. ಹಾಗೆಯೇ ಮಾಡಿ ತೋರಿಸಿದರು. ಅಂತೆಯೇ ಕಲ್ಯಾಣಕ್ಕೆ ಅವರಿಂದಾದ ಸೇವೆಯ ಉಪಕಾರವನ್ನು ಹತ್ತಾರು ಪೀಳಿಗೆಯಾದರೂ ಸ್ಮರಿಸಬೇಕಾಗುವದು.

ಮೋಹ ವಂಚನೆಗಳಿಲ್ಲ, ಬಿಮ್ಮು ಬಿಗುವುಗಳಿಲ್ಲ, ಭಾವನೆಯೊಳು ದಿಗಂಬರರರಾಗಿ, ನಿರ್ಭಯರಾಗಿ ಕಲ್ಯಾಣದ ನೆಲದಲ್ಲಿಯೇ ಜನಿಸಿದವರಂತೆ, ಎಲ್ಲವೂ ತನಗೆ ಪರಿಚಯವಿದೆ ಎಂಬಂತೆ ಕಲ್ಯಾಣದ ಅಭಿವೃದ್ಧಿಗಾಗಿ ಸಿದ್ಧರಾದರು. ಕಲ್ಯಾಣದಲ್ಲಿರುವಾಗ ಅವರ ಕಣ್ಮುಂದೆ ಬಸವಾದಿಪ್ರಮಥರು ಮತ್ತು ಅವರ ವಚನಗಳೆ! ಕರ್ನಾಟಕದಲ್ಲಿರುವ ಅನೇಕ ಹಿರಿಯ ಸಾಹಿತಿಗಳ ಮತ್ತು ಸಂಶೋಧಕರ ಕಡೆಯಿಂದ ವಚನಗಳ ಪುಸ್ತಕಗಳನ್ನು ತರಸಿಕೊಂಡು ಅವುಗಳನ್ನು ಓದಲು ಪ್ರಾರಂಭಿಸಿದರು. ಆ ವಚನಗಳು ಅವರಿಗೆ ಕಲ್ಯಾಣವನ್ನು ಪುನಃ ಕಟ್ಟುವಲ್ಲಿ ಪ್ರಥಮವಾದವು.

ಫ.ಗು. ಹಳಕಟ್ಟಿಯವರು ವಚನ ಸಾಹಿತ್ಯ ಸಂಶೋಧಿಸಿ, ಸಂಗ್ರಹಿಸಿ, ಪ್ರಕಟಿಸಿ ವಚನ ಪಿತಾಮಹ ಎನಿಸಿಕೊಂಡಂತೆ, ಬಾಬಾಸಾಹೇಬ ವಾರದವರು ಆವಚನ ಸಾಹಿತ್ಯದ ತವರು ನೆಲೆಯಾದ ಕಲ್ಯಾಣಕ್ಕೆ ಬಂದು ಅದರ ಶ್ರಯೋಭಿವೃದ್ಧಿಗಾಗಿ ಹಗಲಿರುಳು ದುಡಿದು ಅಳಿದುಳಿದ ಕಲ್ಯಾಣವನ್ನು ಉಳಿಸಿ ದೇಶದ ಸಾಂಸ್ಕೃತಿಕ ನೆಲಗಳಲ್ಲಿ ಅದಕ್ಕೊಂದು ಸ್ಥಾನ ದೊರೆಯುವಂತೆ ಮಾಡಿ 'ಕಲ್ಯಾಣದ ಪಿತಾಮಹ'ರಾದರು.

ಏಕಾಂಗವೀರರಾಗಿ ಬಾಬಾಸಾಹೇಬರು ಕಾರ್ಯೋನ್ಮುಖರಾದಾಗ ಕಲ್ಯಾಣದ ಅಂದಿನ ಸಮಸ್ತ ಜನತೆ ಅವರ ಕಡೆಗೆ ಧಾವಿಸಿದರು, ಬಾಬಾಸಾಹೇಬರ ಕೆಲಸದಲ್ಲಿ ಕೈಗೂಡಿಸಿದರು. ಅವರ ಪ್ರತಿಯೊಂದು ಮಾತು ವಚನವೆಂದೇ ತಿಳಿದರು. ಅದು ತಮಗಾಗಿ, ತಮ್ಮ ನಾಡಿಗಾಗಿ ಎಂದು ಭಾವಿಸಿದರು, ಕಲ್ಯಾಣದ ಪ್ರಸಿದ್ಧ ಶೇರಿಕಾರ ಮನೆತನದವರಂತೂ ಅವರಿಗೆ ಎಲ್ಲಾ ರೀತಿಯ ಸಹಕಾರ ಕೊಟ್ಟರು, ಆ ಮನೆತನ ತನಗಾವ ರೀತಿಯಲ್ಲಿ ಸಹಕಾರ ಕೊಟ್ಟಿತು ಎನ್ನುವದನ್ನು ಕುರಿತು ಬಾಬಾಸಾಹೇಬರು ತಮ್ಮ ತಾಯಿಗೆ ಪತ್ರ ಬರೆದು ತಿಳಿಸುತ್ತಾರೆ.

ಅವರಷ್ಟೇ ಅಲ್ಲ ಇಡೀ ಕಲ್ಯಾಣದ ಜನತೆ ಜಾತಿ ಮತ ಭೇದವಿಲ್ಲದೆ ಬಾಬಾಸಾಹೇಬರ ಕಡೆಗೆ ಸಹಾಯ ಹಸ್ತ ಚಾಚಿದರು. ಅವರ ಸದಾಚಾರ ಭರಿತ ನಡೆ ನುಡಿ, ನುತನ ವೈಚಾರಿಕ ಸರಣಿ, ಕಲ್ಯಾಣದ ಜನರನ್ನು ಆಕರ್ಷಿಸಿತ್ತು. ಪ್ರತಿಯೊಂದು ಕಾರ್ಯದಲ್ಲಿಯೂ ಶಿಸ್ತು, ಅಚ್ಚುಕಟ್ಟುತನ, ಸ್ಥಿರ ಸಂಕಲ್ಪ, ಎಂತಹ ಸೂಕ್ಷ್ಮ ವಿಷಯವಾದರೂ ಅದನ್ನು ಗ್ರಹಿಸುವ ಶಕ್ತಿ ಮತ್ತು ಎಂತಹ ಜನರಲ್ಲಿಯೂ ಅವರು ಒಂದಾಗಿ ಮಾತಾಡುವ ರೀತಿ ಇವು ಕಲ್ಯಾಣದಲ್ಲಿ ಅವರ ಜನಪ್ರಿಯತೆಗೆ ಕಾರಣೀಭೂತವಾದವು. ಪೂರ್ಣವಾದ ಈ ವ್ಯಕ್ತಿಯಿಂದ ಕಲ್ಯಾಣಕ್ಕೊಂದು ಶಕ್ತಿ ಬಂದಂತಾಗಿತ್ತು.

ಬಾಬಾಸಾಹೇಬರು ಕಲ್ಯಾಣದಲ್ಲಿದ್ದಾಗ ಯಾವುದೇ ಲೋಕಸಭೆ, ವಿಧಾನಸಭೆಯ ಸದಸ್ಯರಾಗಿರಲಿಲ್ಲ. ಯಾವ ದೊಡ್ಡ ಅಧಿಕಾರವೂ ಅವರ ಕೈಯೊಳಗಿರಲಿಲಲ. ಆದರೆ ಅವರು ಮಾಡಲಾರದಂತಹ ಕೆಲಸಗಳನ್ನು ಮಾಡಿ ತೋರಿಸಿದರು. ಅದಕ್ಕೆ ಮುಖ್ಯ ಕಾರಣ ಅವರ ಭೂಮಿ ತೂಕದ ಮಾತು ಮತ್ತು ಕೃತಿ.ಮುಖ್ಯಮಂತ್ರಿಗಳಿಂದ ಹಿಡಿದು ಜಿಲ್ಲಾಧಿಕಾರಿಗಳವರೆಗೆ ಯಾರೂ ಅವರೊಂದಿಗೆ ನಕಾರಾತ್ಮಕ ಭಾವನೆ ತೋರಿಸಲಿಲಲ. ಬಹಳ ಸಂತೋಷದಿಂದ ತಮ್ಮ ಒಪ್ಪಿಗೆ ನೀಡಿ ಅವರು ಕೇಳಿದನ್ನು ಮಾಡಿ ಕೊಡುತ್ತಿದ್ದರು.

೧. ಶ್ರೀ ಬಸವೇಶ್ವರ ದೇವಸ್ಥಾನ ಪಂಚಕಮಿಟಿ ಸ್ಥಾಪನೆ :

೧೯೪೭ ರಲ್ಲಿ ಕಲ್ಯಾಣಕ್ಕೆ ಕಾಲಿಟ್ಟ ಬಾಬಾಸಾಹೇಬರು ೧೯೪೮ರ ಬಸವ ಜಯಂತಿಯಂದು 'ಶ್ರೀ ಬಸವೇಶ್ವರ ದೇವಸ್ಥಾನ ಪಂಚಕಮಿಟಿ'ಯನ್ನು ಹುಟ್ಟುಹಾಕಿದರು. ಅಂದು ಅದು 'ಕಲ್ಯಾಣದ ಸಂಸತ್ತು' ಆಗಿ ಕೆಲಸ ನಿರ್ವಹಿಸತೊಡಗಿತು. ಇಡೀ ಕಲ್ಯಾಣ ನಾಡಿನ ಮತ್ತು ಕಲ್ಯಾಣ ಜನತೆಯ ಸರ್ವಾಂಗಿಣ ಅಭಿವೃದ್ಧಿಯೇ ಇದರ ಮೂಲ ಗುರಿಯಾಗಿತು.

ಬಸವಣ್ಣನವರ ಮೂಲ ತತ್ವಗಳನ್ನೆ ಗಮನದಲ್ಲಿಟ್ಟುಕೊಂಡು ಹುಟ್ಟಿದ ಈ ಕಮಿಟಿ ಕೇವಲ ವೀರಶೈವ ಧರ್ಮದವರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಸಮಾಜದ ಎಲ್ಲಾ ಜಾತಿ ಜನಾಂಗದವರು ಇದರ ಸದಸ್ಯರಾಗಬಹುದಿತ್ತು. ಬ್ರಾಹ್ಮಣರಾಗಿದ್ದ ಶ್ರೀ ಗೋಪಾಲದೇವ ಶಾಸ್ತ್ರಿ ಎನ್ನುವವರು ಇದರ ಕಾರ್ಯದರ್ಶಿಗಳಾಗಿದ್ದರು ಮಾದಿಗ ಸಮಾಜದ ಗುಂಡಪ್ಪಾ ಮದಾರೆ, ಎನ್ನುವವರು, ಕ್ಷೌರಿಕ ಸಮಾಜದ ನೀಲಕಂಠಪ್ಪ ವಕೀಲ, ಮುಸ್ಲಿಂ ಸಮಾಜದ ಶ್ರೀ ತಾಜೋದ್ದಿನ್ ನವಾಜಭಾಯಿ ಹೀಗೆ ಬೇರೆ ಬೇರೆ ಸಮಾಜದವರು ಕೂಡಾ ಇದರ ಸದಸ್ಯರಾಗಿ, ಕಾರ್ಯದರ್ಶಿಗಳಾಗಿ ಆಗಿ ಕೆಲಸ ನಿರ್ವಹಿಸಿದರು. ಹೀಗಾಗಿ ಈ ಪಂಚಕಮಿಟಿ 'ಬಸವಕಲ್ಯಾಣದ ಸಂಸತ್ತು' ಎಂಬ ಹೆಗ್ಗಳಿಕೆ ಪಡೆಯಿತು.

ಬಾಬಾಸಾಹೇಬರು ತಮ್ಮ ಯೋಜನೆಗಳನ್ನೆಲ್ಲಾ ಸಾಕಾರಗೊಳಿಸಿದ್ದು ಇದರ ಮುಖಾಂತರವೇ. ಇಲ್ಲಿ ಇದರ ಮೊದಲು ಯಾವುದೇ ಆರ್ಥಿಕ ನೆರವು ಇರಲಿಲ್ಲ. ಕಲ್ಯಾಣದ ರೈತರು ಮತ್ತು ವ್ಯಾಪಾರಿಗಳು ತಮ್ಮ ಭಾಗದ ಒಂದಿಷ್ಟು ಲಾಭವನ್ನು ತಂದು ಇದಕ್ಕೆ ಕೊಡುತ್ತಿದ್ದರು. ಅಲ್ಲಿ ಸಂಗ್ರಹಿತವಾದ ಹಣಕ್ಕೆ ವಾರದವರು ತಮ್ಮ ಪರವಾಗಿ ಒಂದಿಷ್ಟು ಹಣವನ್ನು ಶೇಖರಿಸಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಪ್ರಾರಂಭಿಸಿದರು. ಪಂಚಕಮಿಟಿಯ ಆಫೀಸ ಕಾರ್ಯಾಲಯವನ್ನು ಮೊದಲು ಪ್ರಾರಂಭಿಸಿದರು. ಅದರ ಮುಖಾಂತರ ಇವರ ಆಡಳಿತ ನಡೆಯುತ್ತಿತ್ತು.

ಕಲ್ಯಾಣದ ದರ್ಶನಕ್ಕಾಗಿ ಬರುವ ಭಕ್ತರಿಗೆ ಮೊದಲು ದಾಸೋಹದ ವ್ಯವಸ್ಥೆ ಮಾಡಿದರು. ಬಂದವರು ಯಾರೇ ಇರಲಿ ಅಲ್ಲಿ ಪ್ರಸಾದ ಪಡೆಯುತ್ತಿದ್ದರು. ಅಲ್ಲಿ ನಡೆಯುತ್ತಿದ್ದ ದಾಸೋಹ ಸೇವೆಯಲ್ಲಿ ಅಂದಿನ ೧೨ನೆಯ ಶತಮಾನದ ಶರಣರ ದಾಸೋಹ ಪರಂಪರೆಯನ್ನು ಗುರುತಿಸಿಕೊಂಡರು. ಹೀಗಾಗಿ ದಾಸೋಹ ನಿರಂತರವಾಯಿತು. ಬಸವಣ್ಣನವರು ಅನುಭವಮ ಮಂಟಪದ ಹಿರಿತನವನ್ನು ವಹಿಸಿಕೊಂಡಂತೆ ವಾರದವರು ಪಂಚಕಮಿಟಿಯ ಹಿರಿತನವನ್ನು ವಹಿಸಿಕೊಂಡರು. ತಮ್ಮ ತನು, ಮನ, ಧನಗಳನ್ನು ಇದಕ್ಕೆ ಸಮರ್ಪಿಸಿಕೊಂಡರು. ಹೀಗೆ ಮಾಡುವಾಗ ಅವರಿಗೆ ಯಾವುದೇ ಅಹಂಕಾರ ಕಾಡಲಿಲ್ಲ, ಮಾಡುತ್ತಿದ್ದೇನೆಂಬ ಭಾವ ಬಲಿಯಲಿಲ್ಲ. ತಾನು ಮಾಡುತ್ತಿರುವದು ಬಸವಾದಿ ಪ್ರಮಥರಿಗಾಗಿ, ಅವರ ಕರ್ಮಭೂಮಿಗಾಗಿ ಎಂದು ಪರಿಭಾವಿಸಿದರು. ಈ ಪರಿಭಾವನೆಯ ಸಾಕ್ಷಾತ್ಕಾರವನ್ನು ಆ ಪಂಚಕಮಿಟಿಯಲ್ಲಿ ಮಾಡಿಕೊಂಡರು.

ಈ ಪಂಚಕಮಿಟಿಗೆ ಅವರು ಭಕ್ತಿ, ಜ್ಞಾನ, ಕ್ರಿಯೆಗಳ ಅಡಿಪಾಯ ನಿರ್ಮಿಸಿದರು. ಕಲ್ಯಾಣ ನಾಡಿನ ರೈತರ, ವ್ಯಾಪಾರಿಗಳ ಸಮರ್ಪಣಾ ಭಾವದ ಭಕ್ತಿಯ ಬೆವರಿನ ಫಲ ಪಂಚಕಮಿಟಿಯು ಎಲ್ಲಾ ಯೋಜನೆಗಳ ಅಡಿಪಾಯವಾಗಿತ್ತು. ಇದನ್ನು ಮನಗಂಡ ಬಾಬಾಸಾಹೇಬರು ಆ ಹಣವನ್ನು ಬಹಳ ಜಾಗರೂಕತೆಯಿಂದ ನೋಡಿಕೊಂಡರು. ತಮ್ಮ ವೈಯಕ್ತಿಕ ಲಾಭಕ್ಕಾಗಿಯಂತೂ ಅದನ್ನು ಬಳಸಿಕೊಳ್ಳಲಿಲ್ಲ. ಮತ್ತು ಆ ಹಣ ವಾಮಮಾರ್ಗಕ್ಕೂ ಹೋಗುವದಕ್ಕೂ ಬಿಡಲಿಲ್ಲ. ಕಲ್ಯಾಣದ ಜನತೆಯ ಮತ್ತು ಅಧ್ಯಕ್ಷ ಬಾಬಾಸಾಹೇಬ ವಾರದವರಿಂದಾಗಿ ಬಸವೇಶ್ವರ ದೇವಸ್ಥಾನ ಪಂಚಕಮಿಟಿಗೆ ಬಹುದೊಡ್ಡ ಬಲಬಂದತಾಯಿತು. ಕಲ್ಯಾಣದ ಜನರು ಉತ್ಸುಕರಾಗಿ ಇವರೊಂದಿಗೆ ಕಾರ್ಯ ನಿರ್ವಹಿಸತೊಡಗಿದರು. ಹೀಗೆ ಬಸವಾದಿ ಶಿವಶರಣರ ಕಲ್ಯಾಣ ನಾಡನ್ನು ಕಟ್ಟುವಲ್ಲಿ ಈ ಕಮಿಟಿ ಆಡಿದ ಪಾತ್ರ ಬಹುದೊಡ್ಡದು. ಅಸಂಖ್ಯಾತ ಜನರು ದಿನಾಲು ಕಲ್ಯಾಣಕ್ಕೆ ಬರುತ್ತಾರೆ. ಬಸವಾದಿ ಪ್ರಮಥರ ಮೇಲಿನ ಭಕ್ತಿ ಆ ದರ್ಶನಾರ್ಥಿಗಳನ್ನು ಕಲ್ಯಾಣಕ್ಕೆ ಎಳೆದು ತರುತ್ತದೆ. ಭವ್ಯವಾದ ಗುಡಿಗೋಪುರಗಳು ಕಲ್ಯಾಣದಲಲಿ ಇರಲಿಕ್ಕಿಲ್ಲ, ಬಂಗಾರ ಬೆಳ್ಳಿಯ ಮೂರ್ತಿಗಳು, ಕಳಸಗಳು ಕಾಣಲಿಕ್ಕಿಲ್ಲ. ದರ್ಶನಾರ್ಥಿಗಳು ಅದಕ್ಕಾಗಿ ಬರದೆ ಶರಣರ ಮಹಾ ಬದುಕು ಅವರನ್ನು ಸೆಳೆಯುತ್ತದೆ. ಅವರು ಬದುಕಿ ಬಾಳಿದ ಗವಿಗಳ ಹತ್ತಿರ ಒಡೆದು ಬಿದ್ದ ಕಲ್ಲುಗಳ ಕಂಡು ಭಕ್ತಿಯಿಂದ ನಮಸ್ಕರಿಸುತ್ತಾರೆ. ಮನದಾಳದಲ್ಲಿ ಒಂದಡೆ ಎಲ್ಲಿಯೋ ವ್ಯಥೆಯು ಪಡುತ್ತಾರೆ ಬಾಬಾಸಾಹೇಬರ ಸುಕೃತ ಫಲದಿಂದಾಗಿ ಹನ್ನೆರಡನೆಯ ಶತಮಾನದ ಎಲ್ಲಾ ಶರಣರ ಸ್ಥಳಗಳಲ್ಲದಿದ್ದರೂ ಕೆಲ ಶರಣರ ಸ್ಥಳಗಳು ನಮಗೆ ನೋಡಲು ಸಿಗುತ್ತವೆ.

ಹೀಗೆ ೧೯೪೮ ರಿಂದ ೧೯೭೩ ಮೇ ತನಕ ಅಂದರೆ ಸುಮಾರು ೨೪ ವರ್ಷಗಳವರೆಗೂ ಅವರು ಪಂಚಕಮಿಟಿ ಅಧ್ಯಕ್ಷರಾಗಿ ಉಳಿದು ಕಲ್ಯಾಣದ ಸೇವೆಗೈದರು. ೧೯೭೩ ಜೂನ್‌ದಿಂದ ಬಾಬಾಸಾಹೇಬರು ಆ ಕಮಿಟಿಯ ಗೌರವ ಅಧ್ಯಕ್ಷರಾಗಿ, ಸಲಹೆಗಾರರಾಗಿ ಕೆಲಸ ನಿರ್ವಹಿಸುತ್ತಿದ್ದರು. ಸಲಹೆಗಾರರಾದ ತರುವಾಯವೂ ಪಂಚಕಮಿಟಿಯದೇ ಅವರಿಗೆ ಧ್ಯಾನ, ಬವಸಕಲ್ಯಾಣದಲ್ಲಿರುವ ಆಡಳಿತ ಮಂಡಳಿಯವರೂ ಸಹ ಏನೇ ಕೆಲಸವಿರಲಿ ಬಾಬಾಸಾಹೇಬರ ಗಮನಕ್ಕೆ ತಂದು ತಮ್ಮ ಕೆಲಸಗಳನ್ನು ಮಾಡುತ್ತಿದ್ದರು.

೦೨. ೧೬ನೆಯ ಅಖಿಲ ಭಾರತ ವೀರಶೈವ ಮಹಾಸಭಾ ಕಾರ್ಯಕ್ರಮ :

ಕ್ರಿ.ಶ. ೧೯೫೨ರಲ್ಲಿ ಅಂದಿನ ಬೊಂಬಾಯಿ ಸರಕಾರದ ಸಹಕಾರ ಮಂತ್ರಿಗಳಾದ ಶ್ರೀ ಎಂ.ಪಿ.ಪಾಟೀಲರು ಬಾಬಾಸಾಹೇಬರ ವಿನಂತಿಯ ಮೇರೆಗೆ ಬಸವಕಲ್ಯಾಣಕ್ಕೆ ಭೇಟಿಕೊಟ್ಟಿದ್ದರು. ಎರಡು ದಿವಸ ಅಲ್ಲಿಯೇ ಉಳಿದ ಎಲ್ಲಾ ಪುರಾತನ ಸ್ಥಳಗಳಿಗೂ ಮತ್ತು ಶರಣರ ಗವಿಗಳನ್ನು ದರ್ಶನ ಮಾಡಿದರು. ಅವುಗಳ ವಾಸ್ತವಿಕ ಸ್ಥಿತಿ ಅವರ ಗಮನಕ್ಕೆ ಬಂತು. ಬಾಬಾಸಾಹೇಬರ ಅಧ್ಯಕ್ಷತೆಯಲ್ಲಿ ಕಲ್ಯಾಣದ ಸಮಸ್ತ ಜನರ ಎದುರಿಗೆ ತಮಗಾದ ಅನುಭವಗಳನ್ನು ಅವರು ಹೀಗೆ ಬಿಚ್ಚಿಟ್ಟರು.

“ಶರಣರ ಸ್ಮಾರಕಗಳನ್ನು ಉಳಿಸಿಕೊಳ್ಳಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಿದೆ. ಇಂದಿನ ಕಲ್ಯಾಣದ ಸ್ಥಿತಿ ರಾಜಕೀಯ ಮುಖಂಡರಿಗೂ ಮತುತ ಮಠಾಧೀಶರಿಗೂ ತಿಳಿಸಿಕೊಡುವದು ಅವಶ್ಯವಾಗಿದೆ. ಆದ್ದರಿಂದ ಅಖಿಲ ಭಾರತ ವೀರಶೈವ ಮಹಾಸಭಾ ಕಾರ್ಯಕ್ರಮ ಬಸವಕಲ್ಯಾಣದಲ್ಲಿ ನಡೆಸಬೇಕಾಗಿದ್ದು ಅನಿವಾರ್ಯವಾಗಿದೆ. ಈ ಕಾರ್ಯಕ್ರಮದಲ್ಲಿ ಅಸಂಖ್ಯಾತ ಹಿರಿಯರು, ಯುವಕರು, ಮುಖಂಡರು ಮಠಾಧೀಶರು ಸೇರುವರು. ಎಲ್ಲರ ಸಮ್ಮುಖದಲ್ಲಿ ಇದರ ಚರ್ಚೆ ಆಗಿದ್ದಾದರೆ ಕಲ್ಯಾಣದ ಪ್ರಗತಿ ಸಾಧ್ಯವಿದೆ” ಎಂದು ಮಾತಾಡಿದಾಗ ಅಲ್ಲಿ ಸೇರಿದ ಜನತೆ ಚಪ್ಪಾಳೆ ತಟ್ಟುವದರೊಂದಿಗೆ ತಮ್ಮ ಒಪ್ಪಿಗೆಯನ್ನು ಸಂತೋಷದಿಂದ ಕೊಟ್ಟರಲ್ಲದೆ, ಅದಕಾಕಗಿ ತಾವು ಎಲ್ಲಾ ರೀತಿಯಿಂದಲೂ ಸಹಕಾರ ಕೊಡುವದಾಗಿ ಭರವಸೆ ನೀಡಿದರು. ಹೀಗಾಗಿ ಬಸವಕಲ್ಯಾಣದಲ್ಲಿಯೇ ೧೬ನೆಯ ಮಹಾ ಅಧಿವೇಶನ ನಡೆಸಲು

ನಿಶ್ಚಯಿಸಲಾಯಿತು.

೧೪.೦೧.೧೯೫೩ ಜನೇವರಿಯಲ್ಲಿ ಹೈದ್ರಾಬಾದದಲ್ಲಿ ಅಖಿಲ ಭಾರತ ಕಾಂಗ್ರೇಸ್ ಕಮೀಟಿಯ ಮಹಾ ಅಧಿವೇಶನ ಜರುಗಿತು. ಅಲ್ಲಿ ಭಾರತ ದೇಶದ ವಿವಿಧ ಭಾಗಗಳಿಂದ ಬಂದ ಕಾರ್ಯಕರ್ತರು ಮತ್ತು ಮುಖಂಡರು ಉಪಸ್ಥಿತರಿದ್ದರು. ಆ ಸಮಯದಲ್ಲಿ ಹೈದ್ರಾಬಾದ ವೀರಶೈವ ಕಾರ್ಯಕರ್ತರು ಒಂದು ಮೀಟಿಂಗ್ ನಡೆಸಿದರು. ಅದರಲ್ಲಿ ಶ್ರೀ ಎಸ್.ನಿಜಲಿಂಗಪ್ಪಾ (ಎಂ.ಪಿ) ಶ್ರೀ ಅಣ್ಣಾರಾವ ಗಣಮುಖಿ (ಮಾಜಿ ಸ್ಥಾನಿಕ ಸ್ವರಾಜ್ಯ ಮಂತ್ರಿ) ಶ್ರೀ ಆರಾಧ್ಯ ತುಮಕೂರ, ಶ್ರೀ ಪ್ರಭುರಾವಜಿ ವಕೀಲರು ಉದಗೀರ, ಶ್ರೀ ಬಾಬಾಸಾಹೇಬ ವಾರದ ಮತುತ ಬಸವೇಶ್ವರ ದೇವಸ್ಥಾನ ಪಂಕಮೀಟಿ ಸದಸ್ಯರು ಮತ್ತು ದೇಶದ ಇತರ ಭಾಗಗಳಿಂದ ಬಂದ ಕಾರ್ಯಕರ್ತರು ಪಾಲ್ಗೊಂಡರು.

ಈ ಅಧಿವೇಶನಕ್ಕೆ ಉದ್ಘಾಟಕರಾಗಿ ಮೈಸೂರಿನ ಅಂದಿನ ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರು, ಅಧ್ಯಕ್ಷರಾಗಿ ಶ್ರೀಮನ್ ನಿರಂಜನ ಪ್ರಣವ ಸ್ವರೂಪಿ ಪರಮ ಪೂಜ್ಯ ಸಂಗನಬಸವ ಮಹಾಸ್ವಾಮಿಗಳು ಬಂಥನಾಳ ಆಗಮಿಸಿದ್ದರು. ವೀರಶೈವ ಧರ್ಮ ಧ್ವಜಾರೋಹಣ ಕಲಬುರ್ಗಿ ಶರಣಬಸವೇಶ್ವರ ಸಂಸ್ಥಾನದ ಏಳನೇಯ ಪೀಠಾಧಿಪತಿಗಳಾದ ಪರಮಪೂಜ್ಯ ದೊಡ್ಡಪ್ಪಾ ಅಪ್ಪಾ ನೆರವೇರಿಸಿದರು. ರಾಷ್ಟ್ರಧ್ವಜಾರೋಹಣ ಬೊಂಬಾಯಿ ಸರ್ಕಾರದ ಸಹಕಾರ ಸಚಿವ ಶ್ರೀ ಎಂ.ಪಿ.ಪಾಟೀಲ ನಡೆಸಿಕೊಟ್ಟರು.

**೦೩. ಬಸವಕಲ್ಯಾಣದ ಅಭಿವೃದ್ಧಿಗಾಗಿ ೪೭ ಯೋಜನೆಗಳು :**

ಈ ಅಧಿವೇಶನದ ತರುವಾಯ ಕಲ್ಯಾಣದ ಅಭಿವೃದ್ಧಿಯೇ ಬಾಬಾಸಾಹೇಬರ ಮೂಲ ಗುರಿಯಾಗಿತ್ತು. ಸುಮಾರು ೧೯೫೫ ರಿಂದ ೧೯೬೫ರ ವರೆಗೆ ಅಂದರೆ ಹತ್ತು ವರ್ಷಗಳಲ್ಲಿ ಅವರು ಸೊಲ್ಲಾಪುರದಲ್ಲಿ ಇದ್ದದ್ದು ಕಡಿಮೆ. ಕಲ್ಯಾಣವೇ ಅವರ ವಾಸಸ್ಥಾನವಾಯಿತು. ಈ ಹತ್ತು ವರ್ಷಗಳ ಅವಧಿಯಲ್ಲಿ ಆಧುನಿಕ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಅವರುಗೈದ ಪ್ರಯತ್ನ ನಾವಿಂದೆಂತು ಮರೆಯುವದು? ಒಂದೇ, ಎರಡೇ ಅದೆಷ್ಟೋ ರೀತಿಯ ಯೋಜನೆಗಳನ್ನು ಕೈಕೊಂಡಿದ್ದಾರೆ. ಕಲ್ಯಾಣದ ಅಭಿವೃದ್ಧಿಗಾಗಿ ಸುಮಾರು ೪೭ ಅಂಶಗಳ ಯೋಜನೆಯೊಂದನ್ನು ಸಿದ್ಧಪಡಿಸಿ ೦೬.೦೭.೧೯೫೮ ರಂದು ಅಂದಿನ ಮೈಸೂರು ರಾಜ್ಯದ ಮಂತ್ರಿಗಳಿಗೆ ಸಲ್ಲಿಸಿದರು.

ಈ ನಲವತ್ತೇಳು ಯೋಜನೆಗಳಿಂದ ಕಲ್ಯಾಣದ ಏಳಿಗೆ ಸಾಧ್ಯವೆಂಬುದು ಅವರ ಬಲವಾದ ನಂಬಿಕೆಯಾಗಿತ್ತು. ತುಂಬಾ ದೂರ ದೃಷ್ಟಿಯನ್ನಿಟ್ಟುಕೊಂಡು ಈ ಯೋಜನೆಯನ್ನು ಅವರು ರೂಪಿಸಿದ್ದರು. ಸರ್ಕಾರದ ಸಹಾಯವಿಲ್ಲದೆ ಅವುಗಳನ್ನು ಅನುಷ್ಟಾನದಲ್ಲಿ ತರುವುದು ಕೂಡಾ ಅಸಾಧ್ಯವಾದ ವಿಷಯವೆಂಬುದು ಅವರಿಗೆ ಗೊತ್ತಿತ್ತು ಕರ್ನಾಟಕದ ಅಂದಿನ ಹಿರಿಯ ರಾಜಕೀಯ ಮುಖಂಡರೊಂದಿಗೆ ನಿಕಟವಾದ ಸಂಪರ್ಕವು ಅವರಿಗೆ ಇರುವುದರಿಂದ ಆ ಕೆಲಸ ಅವರಿಗೆ ಕಠಿಣವೆನಿಸಲಿಲ್ಲ.

ಇಂತಹ ದೊಡ್ಡ ಯೋಜನೆಯೊಂದನ್ನು ಸಿದ್ಧಪಡಿಸಿ ಅದನ್ನು ೧೯೫೮ಕ್ಕೆ ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿಯವರಿಗೆ ಸಲ್ಲಿಸಿದ್ದರು. ಅದಕ್ಕಿಂದ ಮೊದಲು ಕಲ್ಯಾಣವು ಹೈದ್ರಾಬಾದ ಸರಕಾರಕ್ಕೆ ಸಂಬಂಧಿಸಿರುವುದರಿಂದ, ಹೈದ್ರಾಬಾದ ಸರ್ಕಾರದೊಂದಿಗೂ ಕೂಡಾ ತಮ್ಮ ಪ್ರಯತ್ನ ಮುಂದುವರೆಸಿದ್ದರು. ೧೯೫೬ಕ್ಕೆ ಬಸವಕಲ್ಯಾಣವು ಮೈಸೂರು ರಾಜ್ಯಕ್ಕೆ ಒಳಪಟ್ಟಾಗ ಆ ರಾಜ್ಯದ ಮುಖ್ಯಮಂತ್ರಿಗಳೊಂದಿಗೆ ತಮ್ಮ ಪತ್ರ ವ್ಯವಹಾರ ನಡೆಸಿದರು. ಬಾಬಾಸಾಹೇಬ ವಾರದವರ ಅಧ್ಯಕ್ಷತೆಯಲ್ಲಿ ಅರ್ಪಿಸಿರುವ ಈ ಬಿತ್ತಳಿಕೆ ಬಗ್ಗೆ ಮುಖ್ಯಮಂತ್ರಿಗಳು ಸಂತೋಷಗೊಂಡು ತಕ್ಷಣವೇ ಅವರಿಗೊಂದು ಪತ್ರ ಬರೆದು ಆ ಎಲ್ಲ ಯೋಜನೆಗಳನ್ನು ಈಡೇರಿಸುವದಾಗಿ ಭರವಸೆ ಕೊಟ್ಟು ವಾರದವರಿಗೊಂದು ಪತ್ರ ಬರೆದರು.

## REFERENCES

1)Vachana Book Written By Dr. M.M. Kalaburgi | 2)Kalyan Kanmani Babasaheab Warad Written By Dr. Neelambika Policepatil (Funded by BKDB, Basava Kalyan).